# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **227(252)** |
| **ಉತ್ತರಿಸಬೇಕಾದ ಸಚಿವರು** | : | **ಕೃಷಿ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | : | **18/08/2026.** |

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| **ಅ)** | ರಾಜ್ಯದಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆ ನಡೆದಿದ್ದು ಯಾವಾಗ ; ಒಟ್ಟು ಎಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ; ಎಷ್ಟು ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದೆ. | ಕೃಷಿ ಇಲಾಖೆಯ ವ್ಯಾಪ್ತಿಗೊಳಪಡುವ 05 ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ದಿನಾಂಕ:10/05/2026ರಂದು ನಡೆಸಲಾಗಿರುತ್ತದೆ. (ಕೆಳಗಿನ ಕೋಷ್ಟಕ ನೋಡಿ) |

| ಕ್ರಮ ಸಂಖ್ಯೆ | ಕೃಷಿ ವಿಶ್ವವಿದ್ಯಾಲಯಗಳ ವಿವರ | ವಿದ್ಯಾರ್ಥಿಗಳ ಸಂಖ್ಯೆ | ಪರೀಕ್ಷಾ ಕೇಂದ್ರಗಳ ಸಂಖ್ಯೆ |
|---|---|---|---|
| 1 | ಕೃಷಿ ವಿಶ್ವವಿದ್ಯಾಲಯ, ಧಾರವಾಡ | 5266 | 02 |
| 2 | ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು | 23593 | 17 |
| 3 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ | 4214 | 02 |
| 4 | ಕೃಷಿ ವಿಶ್ವವಿದ್ಯಾಲಯ, ರಾಯಚೂರು | 2707 | 02 |
| 5 | ಕೃಷಿ ವಿಶ್ವವಿದ್ಯಾಲಯ, ಮಂಡ್ಯ | 2293 | 02 |

| | | |
|---|---|---|
| **ಆ)** | ಕೃಷಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಲೋಪಗಳು ನಡೆದಿರುವ ಕುರಿತು ದೂರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ದೂರುಗಳು ಬಂದಿವೆಯೇ; | ಬಂದಿರುತ್ತದೆ. |

| | | |
|---|---|---|
| **ಇ)** | ಈ ವಿಚಾರದಲ್ಲಿ ಸರ್ಕಾರ ತನಿಖೆ ನಡೆಸಿದೆಯೇ; ತನಿಖೆಯಲ್ಲಿ ಕಂಡುಬಂದಿರುವ ಅಂಶಗಳೇನು ; | ತನಿಖೆ ನಡೆಸಲಾಗಿರುವುದಿಲ್ಲ. |
| **ಈ)** | ಪರೀಕ್ಷೆಯಲ್ಲಿ ಲೋಪಗಳು ನಡೆದಿರುವ ಕಾರಣ ಮರು ಪರೀಕ್ಷೆ ನಡೆಸುವ ಕುರಿತು ಸರ್ಕಾರದ ನಿಲುವೇನು ? | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ವ್ಯಾಪ್ತಿಗೊಳಪಡುವ ಹಿರಿಯೂರು ಕೇಂದ್ರದಲ್ಲಿ ಕೃಷಿ ಪ್ರಾಯೋಗಿಕ ಪರೀಕ್ಷೆ ಕುರಿತು ಹಲವು ಅಭ್ಯರ್ಥಿಗಳು ಮತ್ತು ಪೋಷಕರುಗಳಿಂದ ಮನವಿಗಳು ಬಂದಿದ್ದು, ಸದರಿ ಮನವಿಗಳನ್ನು ಪರಿಶೀಲಿಸಲಾಗಿ, ಕೃಷಿ ಕೋಟಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಯಮಾನುಸಾರ ಮತ್ತೊಮ್ಮೆ ವ್ಯವಸ್ಥಿತವಾಗಿ ಮರು ಪರೀಕ್ಷೆಯನ್ನು ನಡೆಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ದಿನಾಂಕ: 01/06/2026ರಂದು ಮರು ಪರೀಕ್ಷೆಯನ್ನು ನಡೆಸಲಾಗಿರುತ್ತದೆ. |

**ಇ-ಸಂಖ್ಯೆ: AGRI/89/AUM/2026.**

(ಪಿ.ಎಂ. ನರೇಂದ್ರ ಸ್ವಾಮಿ)
ಕೃಷಿ ಸಚಿವರು